ಮಯೂರ ವಿಶೇಷ

## ಶತಮಾನದ ನಮನ

# ಸೃಷ್ಟಿ ಸಂಪರ್ಕಕ್ಕೆ ಎಷ್ಟು ಹತ್ತಿರದ ಜೀವ!



**ರಾಜೇಂದ್ರ ಚೆನ್ನಿ**

ದೇಹದ ಆಧಾರವೇ ಕುಸಿಯುತ್ತಿರುವಾಗ, ಖಾಲಿ ಟಿನ್ನುಗಳ ಬೀದಿ ಧೂಳಲ್ಲೂ ಮೈತಳೆದ ಕೌತುಕವ ಗಮನಿಸಿ ಪುಳಕಗೊಂಡ ಕವಿ. ಗಂಗಾಧರ ಚಿತ್ತಾಲರ ಕಾವ್ಯ ಬೇರು, ಅಂಕುರ, ಚಿಗುರುಗಳನ್ನು ಧ್ಯಾನಿಸುವಂತಹದ್ದು.

ಗಂಗಾಧರ ಚಿತ್ತಾಲರ ಕಾವ್ಯದ ಶ್ರೇಷ್ಠತೆಯ ಮೂಲವಿರುವುದು ಕಾವ್ಯದ ಗಾಂಭೀರ್ಯ, ಮಹತ್ವದ ಬಗ್ಗೆ ಇರುವ ಶ್ರದ್ಧೆಯಲ್ಲಿ. ಅವರಿಗೆ ಕಾವ್ಯವು ಕೇವಲ ಒಂದು ಕಲಾಮಾಧ್ಯಮವಾಗಿರಲಿಲ್ಲ. ಅದು ಬದುಕಿನ ಆಳವಾದ ಅನುಭವಗಳ ಶೋಧನೆ ಮತ್ತು ಅಭಿವ್ಯಕ್ತಿಯಾಗಿತ್ತು. ಅನುಭವ ಪ್ರಾಮಾಣ್ಯದಲ್ಲಿ ಕಾವ್ಯದ ಹುಟ್ಟು ಇರುತ್ತದೆ; ಆದರೆ, ಆ ಪ್ರಾಮಾಣ್ಯವು ಅಥವಾ ಸಾಚಾತನವು ಅದನ್ನು ಕಾವ್ಯವಾಗಿಸುವ ಕೆಲಸದಲ್ಲಿಯೇ ಸಾಬೀತಾಗಬೇಕಿದೆ. ಅಂದರೆ ಕಾವ್ಯ ಕಟ್ಟುವ ಕೆಲಸವು ಅನುಭವದ ಪ್ರಾಮಾಣಿಕತೆಯನ್ನು ಒರೆಗೆ ಹಚ್ಚುವ ಕೆಲಸವೇ ಆಗಿರುತ್ತದೆ. ಇದರಿಂದಾಗಿ ಕಾವ್ಯ ಬರೆಯುವುದು ಗಂಭೀರವಾದ ನೈತಿಕ ಕ್ರಿಯೆಯಾಗಿರುತ್ತದೆ. 'ಹರಿವ ನೀರಿದು' (1970) ಸಂಕಲನದ ಮೊದಲ ಪದ್ಯ 'ಕವನ'ವು ಈ ವಸ್ತುವನ್ನು ಸಂಕೀರ್ಣವಾಗಿ ವಿಶ್ಲೇಷಿಸುತ್ತದೆ.

ಆಮೇಲೆ ಒಂದೇ ಒಂದು–  
ಮಾತು ಮಿದ್ದುವ ಮಸಕ  
ಕಂಡದ್ದು ಉಂಡದ್ದು ಅನಿಸಿದ್ದು ಕನಸಿದ್ದು  
ಮೂಡಿ ಮೈಗೂಡಿದ್ದು ಮೊಳಗಿ ತೊಳಗುವ  
ತನಕ  
ಕೈ ಬಾಯ್ಗೆ ಬರುವನಕ  
ಸ್ಪಂದಿಸುವ ಹೊಸತೊಂದು

ಇನ್ನೊಂದು ಪದ್ಯ 'ಇಂಥ ಹಾಡು'ವಿನಲ್ಲಿ ಚಿತ್ತಾಲರು ಕಾವ್ಯದ ಜವಾಬ್ದಾರಿಯ ಅರಿವೇ ಇಲ್ಲದ ಬಗ್ಗೆ ಕಟುವಾದ ವ್ಯಂಗ್ಯದಿಂದ ಬರೆದಿದ್ದಾರೆ. ನಿಜವಾದ ಹಾಡು ಹೇಗಿರಬೇಕೆಂದರೆ: